# ನಮ್ಮ ವಿದ್ಯಾರ್ಥಿನಿಲಯದ ಸಂಕ್ಷಿಪ್ತ ಪರಿಚಯ

## ಅಲ್ಪಸಂಖ್ಯಾತರ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ

## ಶಿಡ್ಲಘಟ್ಟ ಟೌನ್ ಚಿಕ್ಕಬಳ್ಳಾಪುರ ಜಿಲ್ಲೆ –562015

| | |
|---|---|
| ಪ್ರಾರಂಭವಾದ ವರ್ಷ ಮತು ದಿನಾಂಕ | 2009–2010 ನೇ ಸಾಲು ದಿನಾಂಕ:03–04–2010 |
| ಸರ್ಕಾರಿ ಆದೇಶ | ಎಂಡಬ್ಲ್ಯೂಡಿ 84 ಎಂಡಿಎಸ್ 2007 |
| ಕಟ್ಟಡದ ವಿಸ್ತೀರ್ಣ | ಉದ್ದ 148 ಅಡಿ<br>ಅಗಲ 134 ಅಡಿ |
| ಶಾಲೆಯ ಅಕ್ಷಾಂಶ & ರೇಖಾಂಶ | Lat N 13– 23’59.2836”<br>Long E 77– 51’54.558” |
| ಮಂಜೂರಾತಿಯಾದ | 50 ವಿದ್ಯಾರ್ಥಿಗಳು |
| ಪ್ರಸ್ತುತ ಅಧ್ಯಯನ ಮಾಡುತ್ತಿರುವ | 50 ವಿದ್ಯಾರ್ಥಿಗಳು |
| ತರಗತಿ | ಮೆಟ್ರಿಕ್ ಪೂರ್ವ |
| ಮಾಧ್ಯಮ | – |



## :: ವಿವರಣೆ ::

ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ಶಿಡ್ಲಘಟ್ಟ ಕೇಂದ್ರ ಸ್ಥಾನದಲ್ಲಿರುವ ಅಲ್ಪಸಂಖ್ಯಾತರ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯವು ಸನ್ 2009–10ನೇ ಸಾಲಿನಿಂದ ಬಾಡಿಗೆ ಕಟ್ಟಡದಲ್ಲಿ ನಡೆದಿರುತ್ತದೆ. 2012–13ನೇ ಸಾಲಿನಿಂದ ಸ್ವಂತ ಕಟ್ಟಡದಲ್ಲಿ ನಡೆಯುತ್ತಿದ್ದು, ಪ್ರಸ್ತುತ ನಿಲಯದಲ್ಲಿ 50 ವಿದ್ಯಾರ್ಥಿಗಳು ವಸತಿ ವ್ಯವಸ್ಥೆಯನ್ನು ಪಡೆಯುತ್ತಿದ್ದಾರೆ, ಈ ವಸತಿ ನಿಲಯದಲ್ಲಿ 5 ರಿಂದ 10ನೇ ತರಗತಿ ವರೆಗಿನ ವಿದ್ಯಾರ್ಥಿನಿಯರಿಗೆ ವಸತಿ ವ್ಯವಸ್ಥೆ ಕಲ್ಪಿಸಲಾಗಿದ್ದು, 2017–18ನೇ ಸಾಲಿನಲ್ಲಿ ನಿಲಯವನ್ನು ಮೇಲ್ದರ್ಜೆಗೆ ಏರಿಸಿರುವುದರಿಂದ ಪಿಯುಸಿ ಪ್ರಥಮ ವರ್ಷದಿಂದ ಪದವಿಯ ಅಂತಿಮ ವರ್ಷದವರೆಗಿನ ಎಲ್ಲಾ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ಇಲ್ಲಿ ವಸತಿ ನೀಡಲಾಗುತ್ತಿದೆ.

ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಪಠ್ಯ ವಿಷಯಗಳ ಜೊತೆಗೆ ಪಠ್ಯೇತರ ವಿಷಯದಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವಂತೆ ಮಾಡಿದೆ. ವಿದ್ಯಾರ್ಥಿನಿಲಯದ ಆವರಣದಲ್ಲಿ ಉತ್ತಮವಾದ ಕೈತೋಟವನ್ನು ನಿರ್ಮಿಸಲಾಗಿದೆ. ಲೇಖನ ಸಾಮಾಗ್ರಿಗಳಾದ ಪೆನ್, ಪೆನ್ಸಿಲ್, ರಬ್ಬರ್ ಮುಂತಾದ ಪ್ರತಿ ಮಾಹೆಯಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದ್ದು, ನೋಟ್ ಪುಸ್ತಕ, ಪಠ್ಯಪುಸ್ತಕವನ್ನು ನೀಡಲಾಗುತ್ತಿದೆ. ನಿಯಮಿತವಾಗಿ ಆರೋಗ್ಯ ತಪಾಸಣೆ ನಡೆಸಲಾಗುತ್ತದೆ. ಮೂಲಭೂತ ಸೌಕರ್ಯಗಳಾದ ಕ್ರೀಡಾ ಸಾಮಾಗ್ರಿಗಳು, ಸೋಪ್‌ಕಿಟ್, ಬೆಡ್, ಬೆಡ್‌ಶೀಟ್, ಫಿಲ್ಲೋ, 2ಟಯರ್ ಕಾಟ್ ನೀಡಲಾಗುತ್ತಿದೆ. ಸೋಲಾರ್ ವಾಟರ್ ಹೀಟರ್ (ಬಿಸಿ ನೀರಿಗಾಗಿ) ವಾಟರ್ ಫಿಲ್ಟರ್ ಹಾಗೂ ನಿಲಯಾರ್ಥಿಗಳ ಸುರಕ್ಷತೆಗಾಗಿ ಸಿ.ಸಿ ಕ್ಯಾಮೇರಾ ಅಳವಡಿಸಲಾಗಿದೆ. ಜೊತೆಗೆ ವಿದ್ಯಾರ್ಥಿಗಳಿಗೆ ಪೌಷ್ಠಿಕ ಆಹಾರವನ್ನು ನೀಡಿ ವೈಯಕ್ತಿಕ ಕಾಳಜಿಯನ್ನು ಮಾಡಲಾಗುತ್ತಿದ್ದು, ವಿದ್ಯಾರ್ಥಿಗಳ ಉತ್ತಮ ಫಲಿತಾಂಶಕ್ಕಾಗಿ ಅರೆಕಾಲಿಕ ಶಿಕ್ಷಕರಿಂದ ಭೋದನೆ ಮಾಡಿಸಲಾಗುತ್ತಿದೆ.